ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

**ಸಿ.ಸಿ. ಸಂಖ್ಯೆ.287/2022**

| | | |
|---|---|---|
| ಸಾಕ್ಷಿದಾರರ ಹೆಸರು | ಃ ರಮೇಶ್ | ಸಿ.ಡಬ್ಲ್ಯೂಃ 7 ಪಿ.ಡಬ್ಲ್ಯೂಃ13 |
| ತಂದೆಯ ಹೆಸರು | ಃ ಸಿದ್ದಯ್ಯ | |
| ವಯಸ್ಸು | ಃ 48 ವರ್ಷ | |
| ಉದ್ಯೋಗ | ಃ ಕೂಲಿ ಕೆಲಸ | |
| ವಾಸ ಸ್ಥಳ | ಃ ಅಣಜೂರು | |

ದಿನಾಂಕಃ 20.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ಈಗ ನನಗೆ ತೋರಿಸಿದ ನಿ.ಪಿ.11 ರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ.11(ಬಿ) ಎಂದು ಗುರುತಿಸಲಾಯಿತು. ನಿ.ಪಿ.11 ದಾಖಲೆಗೆ ಯಾವ ದಿನಾಂಕ ಸಹಿ ಮಾಡಿರುತ್ತೇನೆ ಎಂದು ನೆನಪಿಲ್ಲ.ನ

2. ನಿ.ಪಿ.11 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.11 ದಾಖಲೆಗೆ ನನ್ನ ಸಮಕ್ಷಮ ಬೇರೆ ಯಾರು ಸಹಿ ಮಾಡಿರುವುದಿಲ್ಲ. ನಿ.ಪಿ.11 ದಾಖಲೆಯನ್ನು ನಾನು ಓದಿ ನೋಡಿರುವುದಿಲ್ಲ. ನಿ.ಪಿ.11 ದಾಖಲೆಯನ್ನು ನನಗೆ ಪೊಲೀಸರು ಓದಿ ಹೇಳಿರುವುದಿಲ್ಲ. ಯಾವ ಕಾರಣಕ್ಕಾಗಿ ನಿ.ಪಿ.11 ದಾಖಲೆಗೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸದರಿ ಸಹಿಯನ್ನು ಹಾಕಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ನನಗೆ ತೋರಿಸಿದ ನಿ.ಪಿ.12 ನೋಟೀಸಿನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ.12(ಬಿ) ಎಂದು ಗುರುತಿಸಲಾಯಿತು. ನಿ.ಪಿ.13 ಮತ್ತು 14 ರಲ್ಲಿ ನಾನು ಹಾಜರಿರುತ್ತೇನೆ. ಯಾವ ಕಾರಣಕ್ಕಾಗಿ ಸದರಿ ಛಾಯಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

3. ದಿಃ 09.02.2022 ರಂದು ಮಹಜರ್ ಗೆ ಸಹಕರಿಸುವಂತೆ ನನಗೆ ಮತ್ತು ಚಾಸಾ.6 ರವರಿಗೆ ಪೊಲೀಸರು ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಮೇರೆಗೆ ನಾನು ದಿಃ 09.02.2022 ರಂದು ಮಹಜರ್ ಕಾಲದಲ್ಲಿ ಚಾಸಾ.6 ರವರ ಜೊತೆ ಹಾಜರಿದ್ದೆನು ಎಂದರೆ ಸರಿಯಲ್ಲ. ಪೊಲೀಸರು ಮಹಜರ್ ನ್ನು 12.00 ರಿಂದ 13.00 ಗಂಟೆ ವರೆಗೆ ನನ್ನ ಮತ್ತು ಚಾಸಾ.6 ರವರ ಸಮಕ್ಷಮ 7 ನೇ ಆರೋಪಿಯ ಮನೆಯ ಮುಂದೆ ರಸ್ತೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ.6 ರವರ ಸಮಕ್ಷಮ ಪೊಲೀಸರು ನಿ.ಪಿ.11 ರಂತೆ ಮಹಜರ್ ಮಾಡಿ ಆಟೋ ಸಂಖ್ಯೆ ಕೆ.ಎ.18/ಬಿ.5419 ರಂತೆ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.11 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಕೆ.ಸಿ.ಸಿ. ವಕೀಲರಿಂದ – **6** ಮತ್ತು **7** ನೇ ಆರೋಪಿತರ ಪರವಾಗಿಃ

4. ಪಾಟೀ ಸವಾಲು ಇರುವುದಿಲ್ಲ.

ಪಾಟೀ ಸವಾಲು ಶ್ರೀ ಎಸ್.ಡಿ., ಮತ್ತು ಪಿ.ಕೆ. ವಕೀಲರಿಂದ – **1** ರಿಂದ **4** ಮತ್ತು **5** ನೇ ಆರೋಪಿತರ ಪರವಾಗಿಃ

5. ಪಾಟೀ ಸವಾಲು ಇರುವುದಿಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ